# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-8832/2016/ಡಿಆರ್ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 15/02/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಹೆಚ್.ಪಿ.ಮಲ್ಲೇಶ್, ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಾವಣಗೆರೆ, (2) ಶ್ರೀ.ಕೆ.ಗುರುಬಸವರಾಜ ತಹಶೀಲ್ದಾರ್, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ, ಮತ್ತು (3) ಶ್ರೀ.ಹೆಚ್.ಎಸ್.ಸತೀಶ್, ಪೊಲೀಸ್ ಉಪ ನಿರೀಕ್ಷಕರು, ಹರಪನಹಳ್ಳಿ ಪೊಲೀಸ್ ಠಾಣೆ, ದಾವಣಗೆರೆ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಟಿ.ಶ್ರೀಧರ್ ಬಿನ್ ಟಿ.ಉಚ್ಚಂಗೆಪ್ಪ, ಆರ್.ಟಿ.ಐ.ಕಾರ್ಯಕರ್ತರು, 9ನೇ ವಾರ್ಡ್, ವಾಲ್ಮೀಕಿನಗರ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ ಶ್ರೀ.ಹೆಚ್.ಪಿ.ಮಲ್ಲೇಶ್, ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ, ದಾವಣಗೆರೆ, (2) ಶ್ರೀ.ಕೆ.ಗುರುಬಸವರಾಜ ತಹಶೀಲ್ದಾರ್, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ, ಮತ್ತು (3) ಶ್ರೀ.ಹೆಚ್.ಎಸ್.ಸತೀಶ್, ಪೊಲೀಸ್ ಉಪ ನಿರೀಕ್ಷಕರು, ಹರಪನಹಳ್ಳಿ ಪೊಲೀಸ್ ಠಾಣೆ, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಮದಾಪುರ ಕಂದಾಯ ಗ್ರಾಮದ ಸ.ನಂ.429/ಎ ವಿಸ್ತೀರ್ಣ 1-77 ಸರ್ಕಾರಿ ಜಮೀನಾಗಿರುತ್ತದೆ ಮತ್ತು ಸ.ನಂ.429/ಬಿ ವಿಸ್ತೀರ್ಣ 4-32 ಖಾಸಗಿ ಜಮೀನಾಗಿದ್ದು, ಎನ್.ಎ. ಮಾಡಿಸದೆ ಕೆ.ಸಲೀಂಬಾಷ ಮತ್ತು ಅವರ ಪತ್ನಿ ತರನಂಬಾನು ಅವರು ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡಿದ್ದು, ಭೂವಿಜ್ಞಾನಿಗಳು ದಂಡ ಕಟ್ಟುವಂತೆ ಎದುರುದಾರರಿಗೆ ನೋಟೀಸು ನೀಡಿದರೂ ಸಹ ಅವರು ರಾಜಕೀಯ ಪ್ರಭಾವದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಗಣಿಗಾರಿಕೆ ಮಾಡಿದವರ ಮೇಲೆ ಭೂ ಕಂದಾಯ ಕಾಯಿದೆ 192(ಎ) ಅಡಿಯಲ್ಲಿ ಪ್ರಕರಣ ದಾಖಲು ಮಾಡಿರಿ ಎಂದು ತಹಶೀಲ್ದಾರ್ ನೀಡಿದ ಆದೇಶದ ಮೇರೆಗೆ ಕಂದಾಯ ನಿರೀಕ್ಷಕರು ಪೊಲೀಸ್ ಇನ್ಸ್‌ಪೆಕ್ಟರ್ ಹರಪನಹಳ್ಳಿ ಇವರಲ್ಲಿ ದೂರು ದಾಖಲಿಸಲು ಕೇಳಿಕೊಂಡರೆ ಯಾವುದೋ ನೆಪ ಒಡ್ಡಿ ಸುಮಾರು 21 ದಿನ ಕಾಲ ಕಳೆದಿರುತ್ತಾರೆ. ಅವರು ದಾಖಲು ಮಾಡಿದ ಪ್ರಕರಣದಲ್ಲಿ ಉಪಬಂಧ 1 ಮತ್ತು 5 ಇವುಗಳನ್ನು ಪ್ರಕರಣದಲ್ಲಿ ತಿಳಿಸಿರುವುದಿಲ್ಲ. ರಾಜಕೀಯ

ಪ್ರಭಾವದಿಂದ ಕಾನೂನಿನ ಭಯವಿಲ್ಲದೆ ನಡೆಯುತ್ತಿರುವ ತರನಂಬಾನು ಮತ್ತು ಸಲೀಂಬಾಷ ರವರ ಮೇಲೆ ಕ್ರಮ ಕೈಗೊಳ್ಳುವಂತೆ ಕೋರಿಕೊಂಡು ಎದುರುದಾರರ ವಿರುದ್ಧ ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಸ.ನಂ.419/ಬಿಎ7ಪಿ2 ಮತ್ತು 429/ಎ ಪ್ರದೇಶದಲ್ಲಿ ಸಲೀಂಬಾಷಾ ಇವರಿಗೆ 1.75 ಎಕರೆ ವಿಸ್ತೀರ್ಣಕ್ಕೆ ಕಲ್ಲು ಗಣಿ ಗುತ್ತಿಗೆ ಅನುಮತಿ ನೀಡಿದ್ದು, ಅದಕ್ಕೆ ಹೊಂದಿಕೊಂಡಿರುವ ಸರ್ಕಾರಿ ಅನಾದೀನ ಜಮೀನಿನಲ್ಲಿ ಗುತ್ತಿಗೆ ಹೊರಭಾಗದಲ್ಲಿ ತೆಗೆದಿರುವ ಅಂದಾಜು 10,888 ಮೆಟ್ರಿಕ್ ಟನ್ ಮತ್ತು ತರನಂಬಾನು ಇವರ ಹೆಸರಿನಲ್ಲಿರುವ ಪಟ್ಟಾ ಜಮೀನಿನ ಸ.ನಂ.429/ಬಿ ರಲ್ಲಿ ಅಂದಾಜು 5,207 ಮೆಟ್ರಿಕ್ ಟನ್ ಕಟ್ಟಡದ ಕಲ್ಲನ್ನು ಗುತ್ತಿಗೆದಾರರಾದ ಸಲಿಂಬಾಷಾ ಇವರು ತೆಗೆದಿರುವುದು ಕಂಡುಬಂದ ಕಾರಣ ಸದರಿಯವರಿಗೆ ನೋಟೀಸು ಜಾರಿಮಾಡಿ ಸ.ನ.429/ಎ ಮತ್ತು 429/ಬಿ ಯಲ್ಲಿ ಅಕ್ರಮವಾಗಿ ತೆಗೆದು ಸಾಗಾಣಿಕೆ ಮಾಡಿರುವ ಕಟ್ಟಡದ ಕಲ್ಲಿಗೆ ಸಲೀಂಬಾಷಾ ಇವರನ್ನು ಹೊಣೆಗಾರರನ್ನಾಗಿ ಮಾಡಿ ಒಟ್ಟು ರೂ.19,36,400/- ಸರ್ಕಾರಕ್ಕೆ ಪಾವತಿಸುವಂತೆ ನೋಟೀಸು ಜಾರಿ ಮಾಡಲಾಗಿರುತ್ತದೆ. ಸದರಿ ಮೊತ್ತವನ್ನು ಪಾವತಿಸದಿದ್ದಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ ಹಾಗೂ ತಿದ್ದುಪಡಿ ನಿಯಮ 1994 ರಂತೆ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

4) 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರು ಅರ್ಜಿದಾರರ ಅರ್ಜಿ ವಿಚಾರದಲ್ಲಿ ಕಂದಾಯ ನಿರೀಕ್ಷಕರು ಹಾಗೂ ಮೋಜಣಿದಾರರನ್ನು ನಿಯೋಜಿಸಿ ಪ್ರಸ್ತುತ ಸರ್ಕಾರಿ ಜಮೀನಿನಲ್ಲಿ ಒತ್ತುವರಿಯನ್ನು ಗುರುತಿಸಿ 1964 ರ ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 192(ಎ) ಅಡಿ ಒತ್ತುವರಿದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿರುತ್ತದೆ. ಅದೇರೀತಿ ಕ್ರಮ ಕೈಗೊಳ್ಳುವಂತೆ ಗಣಿ ಮತ್ತು ಭೂ ವಿಜ್ಞಾನ ವಿಭಾಗಕ್ಕೆ ಪತ್ರ ಬರೆಯಲಾಗಿರುತ್ತದೆ. ಹಿರಿಯ ಭೂವಿಜ್ಞಾನಿ ಅಕ್ರಮ ಕಲ್ಲು ಗಣಿಗಾರಿಕೆ ಮಾಡುತ್ತಿರುವವರಿಗೆ ನೋಟೀಸು ನೀಡಿ ದಂಡ ಪಾವತಿಸಲು ಆದೇಶಿಸಿರುತ್ತಾರೆಂದು ಹೇಳಿರುತ್ತಾರೆ.

5) 3ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದೂರುದಾರರ ದೂರಿನ ವಿಚಾರದಲ್ಲಿ ದಿ.26/3/16 ರಂದು ಹರಪನಹಳ್ಳಿ ಪೊಲೀಸ್ ಠಾಣೆ ಗುನ್ನೆ ನಂ.62/16 ಕಲಂ 192(ಎ)(1) ಕರ್ನಾಟಕ ಕಂದಾಯ ಅಧಿನಿಯಮ 1964 ರ ಪ್ರಕಾರ ಶ್ರೀಮತಿ.ತರನಂ ಇವರ ವಿರುದ್ಧ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣವು ತನಿಖಾ ಹಂತದಲ್ಲಿರುತ್ತದೆಯೆಂದು ಹೇಳಿರುತ್ತಾರೆ.

6) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಅಕ್ರಮವಾಗಿ ಕಲ್ಲುಗಣಿಗಾರಿಕೆ ಮಾಡಿರುವ ಬಗ್ಗೆ ದಂಡ ಹಣವನ್ನು ಪಾವತಿ ಮಾಡುವಂತೆ ನೋಟೀಸು ಜಾರಿ ಮಾಡಲಾದರೂ ಸಹ ಅಕ್ರಮ ಗಣಿಗಾರಿಕೆ ಮಾಡಿದವರ ವಿರುದ್ಧ ಯಾವುದೇ

ಕ್ರಮವನ್ನು ಕೈಗೊಂಡಿರುವುದಿಲ್ಲ. ಕಂದಾಯ ಇಲಾಖೆ, ಅರಣ್ಯ ಇಲಾಖೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರಿಂದ ಅನುಮತಿ ಪಡೆಯದೆ ಈಗಲೂ ಸಹ ಕಲ್ಲುಗಾರಿಕೆ ನಡೆಸುತ್ತಿರುತ್ತಾರೆ. ಕಸಬಾ ಹೋಬಳಿ, ಮದಾಪುರ ಕಂದಾಯ ಗ್ರಾಮದ ಸ.ನಂ.429/ಎ ವಿ:1.77 ಮತ್ತು 429/ಬಿ ವಿ.4.32 ಎಕರೆಗೆ ಯಾವುದೇ ಕಾರಣಕ್ಕೂ ಅಕ್ರಮ ಕಲ್ಲು ಗಣಿಗಾರಿಕೆ ನಡೆಸದಂತೆ ಆದೇಶ ಮಾಡಬೇಕೆಂದು ಮತ್ತು ಅಕ್ರಮ ಕಲ್ಲುಗಣಿಗಾರಿಕೆ ನಡೆಸುತ್ತಿರುವ ವ್ಯಕ್ತಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

7) ತಹಶೀಲ್ದಾರ್‌ರವರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಅಕ್ರಮ ಕಲ್ಲುಗಣಿಗಾರಿಕೆ ಮಾಡಿರುತ್ತಾರೆಂದು ಕಂಡುಬಂದ ಕಾರಣ ಅವರ ವಿರುದ್ಧ ಪ್ರಕರಣ ದಾಖಲಿಸಲು ಪೊಲೀಸರಿಗೆ ಮನವಿ ಮಾಡಲಾಗಿದೆ ಮತ್ತು ಹಿರಿಯ ಭೂವಿಜ್ಞಾನಿಗಳಿಗೆ ವರದಿಯನ್ನು ಸಲ್ಲಿಸಲಾಗಿರುತ್ತದೆಯೆಂದು ಹೇಳಿರುತ್ತಾರೆ. ಅದೇರೀತಿ 3ನೇ ಎದುರುದಾರರು ಅಕ್ರಮ ಗಣಿಗಾರಿಕೆ ವಿಚಾರವಾಗಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಮತ್ತು ತನಿಖೆ ಪ್ರಗತಿಯಲ್ಲಿದೆಯೆಂದು ತಿಳಿಸಿರುತ್ತಾರೆ. 1ನೇ ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಅಕ್ರಮ ಗಣಿಗಾರಿಕೆ ಮಾಡಿದವರಿಗೆ ದಂಡ ವಿಧಿಸಿರುವುದು ಕಂಡುಬರುತ್ತಿದೆ. ಆದರೆ, ಸದರಿ ದಂಡದ ಹಣವನ್ನು ವಸೂಲಾತಿ ಮಾಡಲಾಗಿದೆಯೋ, ಇಲ್ಲವೋ ಎಂಬ ಬಗ್ಗೆ ವರದಿಯಲ್ಲಿ ಯಾವುದೇ ಉಲ್ಲೇಖವಿಲ್ಲ.

8) ಅಕ್ರಮ ಕಲ್ಲುಗಣಿಗಾರಿಕೆ ಮಾಡಿದವರ ವಿರುದ್ಧ ದಾಖಲಾದ ಪ್ರಕರಣ ಈಗ ಯಾವ ಹಂತದಲ್ಲಿದೆಯೆನ್ನುವ ಬಗ್ಗೆ 3ನೇ ಎದುರುದಾರರಿಂದ ಹಾಗೂ ಅಕ್ರಮ ಕಲ್ಲು ಗಣಿಗಾರಿಕೆ ಮಾಡಿದವರ ಮೇಲೆ ವಿಧಿಸಲಾಗಿದೆಯೆಂದು ಹೇಳಲಾದ ದಂಡದ ಮೊತ್ತವನ್ನು ವಸೂಲಾತಿ ಮಾಡಲಾಗಿದೆಯೋ ಇಲ್ಲವೋ ಎಂಬ ಬಗ್ಗೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ 1ನೇ ಎದುರುದಾರರಿಗೆ ಆದೇಶಿಸಲಾಗಿತ್ತು.

9) ಪೊಲೀಸ್ ಉಪ ನಿರೀಕ್ಷಕರು ಹರಪನಹಳ್ಳಿ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಚಂದ್ರಶೇಖರ್ ಎಸ್, ಕಂದಾಯ ನಿರೀಕ್ಷಕರು, ಹರಪನಹಳ್ಳಿ ಹೋಬಳಿ ಇವರು ನೀಡಿದ ದೂರಿನ ಆಧಾರದಲ್ಲಿ ಪರವಾನಗಿ ಇಲ್ಲದೆ ಕಲ್ಲು ಗಣಿಗಾರಿಕೆ ಮಾಡಿ ಸರ್ಕಾರಿ ಆಸ್ತಿಗೆ ಹಾನಿಯಾಗಿರುವ ಬಗ್ಗೆ ಶ್ರೀಮತಿ.ತರನಂಬಾನು ಗಂಡ ಕೆ.ಸಲೀಂಬಾಷಾ ಇವರ ಮೇಲೆ ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 192 (ಎ) ಪ್ರಕಾರ ಪ್ರಕರಣ ದಾಖಲು ಮಾಡಿ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿದೆಯೆಂದು ಹೇಳಿರುತ್ತಾರೆ.

10) ಹಿರಿಯ ಭೂವಿಜ್ಞಾನಿ ದಾವಣಗೆರೆ ಇವರು ತಮ್ಮ ಪತ್ರದಲ್ಲಿ ಅಕ್ರಮವಾಗಿ ತೆಗೆದು ಸಾಗಾಣಿಕೆ ಮಾಡಿರುವ ಖನಿಜಕ್ಕೆ ಸಲೀಂಬಾಷಾರವರನ್ನು ಹೊಣೆಗಾರರನ್ನಾಗಿ ಮಾಡಿ ಒಟ್ಟು ಖನಿಜದ ರಾಜಧನ ಮತ್ತು 5 ಪಟ್ಟು ದಂಡದಂತೆ ಒಟ್ಟು ರೂ.19,36,400/- ಸರ್ಕಾರಕ್ಕೆ ಪಾವತಿಸುವಂತೆ ನೋಟೀಸು ಜಾರಿ ಮಾಡಲಾಗಿದ್ದು, ಸದರಿ ನೋಟೀಸಿಗೆ ಸಂಬಂಧಿಸಿದಂತೆ ಸಲೀಂಬಾಷಾರವರು

ಕಲ್ಲು ಗಣಿ ಗುತ್ತಿಗೆ ಪ್ರದೇಶಕ್ಕೆ ಹೊಂದಿಕೊಂಡಿರುವ ಜಮೀನಿನಲ್ಲಿ ಅವರು ಕಲ್ಲುಗಣಿಗಾರಿಕೆ ನಡೆಸಿರುವುದಿಲ್ಲವೆಂದು ಕಾರಣ ನೋಟೀಸ್ ಹಿಂಪಡೆಯಲು ಕೋರಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ದಂಡದ ಮೊತ್ತವನ್ನು ಪಾವತಿಸಲು ಮತ್ತೊಮ್ಮೆ ನೋಟೀಸ್ ನೀಡಲಾಗಿರುತ್ತದೆ. ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಿಂದ ಮೊಕದ್ದಮೆ ದಾಖಲಿಸಿದ್ದು, ಕಾರಣ ನ್ಯಾಯಾಲಯದ ಆದೇಶವನ್ನು ಪರಿಪಾಲಿಸಿ ನ್ಯಾಯಾಲಯದ ಅಂತಿಮ ಆದೇಶದಂತೆ ಕಚೇರಿಯಿಂದ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

11) ಪೊಲೀಸ್ ಉಪ ನಿರೀಕ್ಷಕರು ಹಾಜರು ಪಡಿಸಿರುವ ದೋಷಾರೋಪಣ ಪಟ್ಟಿಯ ಪ್ರತಿಯನ್ನು ಪರಿಶೀಲಿಸಿದಾಗ, ಅಕ್ರಮ ಕಲ್ಲುಗಣಿಗಾರಿಕೆ ಮಾಡಿರುವ ಕೆ.ಸಲೀಂಬಾಷಾರವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರುವುದು ಕಂಡುಬರುತ್ತಿಲ್ಲ. ಕ್ರಿಮಿನಲ್ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣ ಸಂ.ಸಿಸಿ ನಂ.62/16 ರ ಅಂತಿಮ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಹಿರಿಯ ಭೂವಿಜ್ಞಾನಿಗಳು ತಿಳಿಸಿದ್ದು, ಆದರೆ, ದಂಡದ ಹಣವನ್ನು ವಸೂಲಾತಿ ಮಾಡಲು ಕ್ರಿಮಿನಲ್ ಪ್ರಕರಣದ ವಿಚಾರಣೆ ಬಾಕಿ ಇರುವುದು ಅಡ್ಡಿ ಬರುವುದಿಲ್ಲ ಎಂದು ಅಭಿಪ್ರಾಯ ಪಡಲಾಗಿದೆ. ಮೇಲಿನ ಅಂಶಗಳನ್ನು ಗಮನಿಸಿದಾಗ, ಅಕ್ರಮ ಕಲ್ಲುಗಣಿಗಾರಿಕೆ ನಡೆಸಿರುವ ಕೆ.ಸಲೀಂಬಾಷಾರವರ ವಿರುದ್ಧ ಅಧಿಕಾರಿಗಳು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಕೆ.ಸಲೀಂಬಾಷಾ ಎನ್ನುವವರು ಅಕ್ರಮವಾಗಿ ಕಲ್ಲುಗಣಿಗಾರಿಕೆ ನಡೆಸಿರುವ ವಿಚಾರ ಎದುರುದಾರರ ಗಮನಕ್ಕೆ ಬಂದಿದ್ದರೂ ಸಹ ಸದರಿ ಸಲೀಂಬಾಷಾರವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳದಿರುವುದು 1 ರಿಂದ 3ನೇ ಎದುರುದಾರರ ಕರ್ತವ್ಯ ನಿರ್ಲಕ್ಷ್ಯತನವನ್ನು ತೋರಿಸುತ್ತದೆ. ಅಕ್ರಮವಾಗಿ ಸಾಗಾಣಿಕೆ ಮಾಡಿರುವ ಖನಿಜಕ್ಕೆ ರಾಜಧನ ಮತ್ತು ದಂಡವನ್ನು ಪಾವತಿಸುವಂತೆ ಕೆ.ಸಲೀಂಬಾಷಾರವರಿಗೆ ನೋಟೀಸು ನೀಡಲಾಗಿದ್ದರೂ ಸಹ ಸದರಿ ದಂಡವನ್ನು ಸಲೀಂಬಾಷಾರವರು ಪಾವತಿ ಮಾಡಿರುವುದಿಲ್ಲವೆಂದು 1ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ತಿಳಿಸಿದ್ದು, ಅದನ್ನು ಗಮನಿಸಿದಾಗ, ದಂಡದ ಹಣವನ್ನು ವಸೂಲಾತಿ ಮಾಡಲು 1ನೇ ಎದುರುದಾರರು ಯಾವುದೇ ಕ್ರಮವನ್ನು ಕೈಗೊಂಡಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಅಕ್ರಮ ಕಲ್ಲುಗಣಿಗಾರಿಕೆಯನ್ನು ಕೆ.ಸಲೀಂಬಾಷಾ ಎನ್ನುವವರು ಮಾಡಿದ್ದರೂ ಸಹ ತರನಂಬಾನು ಎನ್ನುವವರ ವಿರುದ್ಧ ಯಾವ ಆಧಾರದಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತಾರೆನ್ನುವ ಬಗ್ಗೆ ಎದುರುದಾರರು ಯಾವುದೇ ವಿವರಣೆಯನ್ನು ಕೂಡ ನೀಡಿರುವುದಿಲ್ಲ. ಕಲ್ಲು ಗಣಿಗಾರಿಕೆಯನ್ನು ಶ್ರೀಮತಿ.ತರನಂಬಾನುರವರ ಪಟ್ಟಾ ಜಮೀನಿನಲ್ಲಿ ಸಲೀಂಬಾಷಾ ಎನ್ನುವವರು ಮಾಡಿರುವ ಬಗ್ಗೆ ದಂಡ ಪಾವತಿಸುವಂತೆ ಹಿರಿಯ ಭೂವಿಜ್ಞಾನಿ, ದಾವಣಗೆರೆ ಇವರು ಸಲೀಂಬಾಷಾರವರಿಗೆ ನೋಟೀಸು ನೀಡಿದ್ದರೂ ಸಹ ತಹಶೀಲ್ದಾರ್‌ರವರು ಸದರಿ ಸಲೀಂಬಾಷಾರವರ ವಿರುದ್ಧ ಪೊಲೀಸರಿಗೆ ಫಿರ್ಯಾದನ್ನು ನೀಡಿರುವುದು ಕಂಡುಬಂದಿರುವುದಿಲ್ಲ. ಅದೇರೀತಿ ಅಕ್ರಮ ಕಲ್ಲುಗಾರಿಕೆಯನ್ನು ಸಲೀಂಬಾಷಾ ಎನ್ನುವವರು ಮಾಡಿರುವ ವಿಚಾರವನ್ನು ಪೊಲೀಸ್ ಉಪ ನಿರೀಕ್ಷಕರು ಸಂಬಂಧಪಟ್ಟ

ಅಧಿಕಾರಿಗಳನ್ನು ವಿಚಾರಿಸಿ ಮಾಹಿತಿಯನ್ನು ಕಲೆ ಹಾಕಿರುವುದು ಕಂಡುಬರುತ್ತಿಲ್ಲ. ಅವುಗಳನ್ನು ಗಮನಿಸಿದಾಗ, ಎಲ್ಲಾ ಎದುರುದಾರರು ಸಲೀಂಬಾಷಾರವರಿಗೆ ಸಹಾಯ ಮಾಡುವ ಸಲುವಾಗಿ ಅವರ ಪರ ವಹಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅದನ್ನು ಪರಿಶೀಲಿಸಿದಾಗ, ಕೇವಲ ತೋರ್ಪಡಿಕೆಗಾಗಿ ಎದುರುದಾರರು ಪ್ರಕರಣವನ್ನು ದಾಖಲಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಖನಿಜದ ರಾಜಧನ ಮತ್ತು 5 ಪಟ್ಟು ದಂಡದಂತೆ ಒಟ್ಟು ರೂ.19,36,400/- ಗಳನ್ನು ಶ್ರೀ.ಸಲೀಂಬಾಷಾ ಇವರಿಂದ ವಸೂಲಿ ಮಾಡದಿರುವುದೂ ಸಹ ಕಂಡುಬರುತ್ತದೆ.

12) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಅಕ್ರಮ ಕಲ್ಲು ಗಣಿಗಾರಿಕೆ ಮಾಡಿದ ಶ್ರೀ.ಸಲೀಂಬಾಷಾ ಇವರಿಂದ ಒಟ್ಟು ರೂ.19,36,400/- ದಂಡದ ಹಣವನ್ನು ವಸೂಲಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 13/2/17.
(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.